ಕನ್ನಡಪ್ರಭ

# ಸಂಸ್ಕಾರ, ಸುಸಂಸ್ಕೃತಿಯಿಂದ ವ್ಯಕ್ತಿತ್ವ ನಿರ್ಧಾರ: ಕಾಗೇರಿ



**ಬೆಂಗಳೂರು:** ವ್ಯಕ್ತಿತ್ವ ಎಂಬುದು ಪರೀಕ್ಷೆಯಲ್ಲಿಗಳಿಸುವ ಅಂಕಗಳಿಂದ ಸಿಗುವುದಿಲ್ಲ. ಅದು ಸಂಸ್ಕಾರ, ಸುಸಂಸ್ಕೃತಿಯಿಂದ ದೊರೆಯುತ್ತದೆ ಎಂದು ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

ನಗರದ ಜೈನ್ ಕಾಲೇಜಿನಲ್ಲಿ ಬುಧವಾರ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಅವರು ಮಾತನಾಡಿದರು. ಶ್ರಮ ಮತ್ತು ನಂಬಿಕೆಯಲ್ಲಿ ಮುಂದಿನ ಶಿಕ್ಷಣ ಹಾಗೂ ಭವಿಷ್ಯವಿದೆ. ಮಕ್ಕಳ ಆಪೇಕ್ಷೆಯನ್ನು ಪ್ರೋತ್ಸಾಹಿಸುವುದು ಪಾಲಕರ ಕರ್ತವ್ಯ ಎಂದು ಹೇಳಿದರು.

ಸಮಾಜದ ಎಲ್ಲಾ ಕ್ಷೇತ್ರಗಳಿಗೂ ಪ್ರತಿಭಾವಂತರ ಅಗತ್ಯವಿದೆ. ಆದ್ದರಿಂದ ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ ಅದನ್ನು ಪ್ರೋತ್ಸಾಹಿಸಿದಾಗ ಆ ಕ್ಷೇತ್ರಗಳಲ್ಲಿ ಪ್ರತಿಭಾವಂತರು ಸಿಗುತ್ತಾರೆ. ಆಗಲೇ ನಮ್ಮ ದೇಶ ಅಭಿವೃದ್ಧಿಯಾಗಲು ಸಾಧ್ಯ ಎಂದು ತಿಳಿಸಿದರು.

ವಿದ್ಯಾರ್ಥಿಗಳು ವೈಯಕ್ತಿಕ ಜೀವನದ ಯಶಸ್ಸಿನ ಜೊತೆಯಲ್ಲಿ ರಾಷ್ಟ್ರ ಜೀವನದ ಯಶಸ್ಸಿಗೂ ಶ್ರಮಿಸಬೇಕು. ರಾಷ್ಟ್ರದ ಸಮಸ್ಯೆಗಳನು ಬಗೆಹರಿಸಲು ಯುವಕರು ಮುಂದೆ ಬರುವುದರಿಂದ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆ ಮಾಡಬಹುದೆಂದರು. ಜೈನ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಆರ್.ಚೆನ್‌ರಾಜ್ ಜೈನ್ ಭಾಗವಹಿಸಿದ್ದರು.